# ಟೀಕೆ ಮತ್ತು ಪ್ರಶಂಸೆ

ಮಗು ಶಾಲೆ ಮುಗಿಸಿ ಈಗಷ್ಟೇ ಮನೆಗೆ ಬಂದಿದೆ. ಅದರ ಮುಖ ಅರಳಿದೆ; ಕಣ್ಣುಗಳಲ್ಲಿ ಸಂತೋಷ ತುಳುಕುತ್ತಿದೆ; ಖುಷಿ ಖುಷಿಯಾಗಿ ತನ್ನೆಲ್ಲಾ ಕೆಲಸವನ್ನೂ ಅಚ್ಚುಕಟ್ಟಾಗಿ ಮುಗಿಸಿ, ರಾತ್ರಿ ನಿರಾಳವಾಗಿ ನಿದ್ದೆ ಮಾಡುತ್ತದೆ. ಮತ್ತೊಂದು ದಿನ ಅದೇ ಮಗು ಶಾಲೆಯಿಂದ ಬಂದಾಗ ಯಾಕೋ ಸಪ್ಪಗಿದೆ; ಮುಖ ಮುದುಡಿಕೊಂಡಿದೆ; ಕಣ್ಣುಗಳಲ್ಲಿ ಅಳು ತೊಟ್ಟಿಕ್ಕುತ್ತಿದೆ. ಎಲ್ಲದರಲ್ಲೂ ನಿರಾಸಕ್ತಿ, ಮಾತಾಡಿದರೆ ಸಿಡಿಮಿಡಿ, ರಾತ್ರಿ ನಿದ್ದೆಯಲ್ಲೂ ಏನೋ ಚಡಪಡಿಕೆ.

ಮಗುವಿನ ವರ್ತನೆಯಲ್ಲಿ ಇಂಥ ವೈಪರೀತ್ಯಕ್ಕೆ ಕಾರಣ ಕಂಡುಹಿಡಿಯಲು ವಿಶೇಷ ಶ್ರಮ ಪಡಬೇಕಾಗಿಲ್ಲ, ಶಾಲೆಯಲ್ಲಿ ಮಗು ಶಿಕ್ಷಕರಿಂದ 'ಭೇಷ್' ಎಂದೋ 'ಎಕ್ಸಲೆಂಟ್' ಎಂದೋ ಪ್ರಶಂಸೆಯ ಮಾತು ಪಡೆದಾಗ, ಅದು ಹಿಗ್ಗುತ್ತದೆ; ಉತ್ತೇಜಿತವಾಗುತ್ತದೆ. ಒಂದು ಒಳ್ಳೆಯ ಮಾತು ಮಗುವಿನಲ್ಲಿ ಹುರುಪು ಮೂಡಿಸಿ, ಇಡೀ ದಿನ ಉತ್ಸಾಹದಿಂದ ವರ್ತಿಸುವಂತೆ ಮಾಡುತ್ತದೆ. ಬದಲಾಗಿ, ಶಿಕ್ಷಕರ ಟೀಕೆ, ಬೈಗುಳ, ಶಿಕ್ಷೆಗಳಿಂದಾಗಿ ಮಗು ಖಿನ್ನವಾಗುತ್ತದೆ; ವ್ಯಗ್ರಗೊಳ್ಳುತ್ತದೆ. ಅದರ ಪರಿಣಾಮ ಮಗುವಿನ ವರ್ತನೆಯಲ್ಲಿ ಪ್ರತಿಫಲಿಸುವಂತಾಗುತ್ತದೆ.

ಟೀಕೆ ಪ್ರಶಂಸೆಗಳ ಪರಿಣಾಮ ಮಕ್ಕಳ ಮೇಲಷ್ಟೇ ಅಲ್ಲ; ಅವುಗಳಿಗೆ ವಯಸ್ಕರ ಪ್ರತಿಕ್ರಿಯೆಯೂ ಹೆಚ್ಚು ಕಡಿಮೆ ಹೀಗೆಯೇ ಇರುತ್ತದೆಯೆಂದರೆ ಆಶ್ಚರ್ಯ ಪಡಬೇಕಿಲ್ಲ, ಸ್ವಭಾವತಃ ಮನುಷ್ಯ ಪ್ರಶಂಸಾಪ್ರಿಯ. ಇತರರಿಂದ ಆತ ಪ್ರಶಂಸೆಯನ್ನೇ ನಿರೀಕ್ಷಿಸುತ್ತಾನೆ; ಟೀಕೆಯನ್ನು ತಿರಸ್ಕರಿಸುತ್ತಾನೆ; ಮಾತ್ರವಲ್ಲ, ಟೀಕಿಸುವವರನ್ನು ದೂರವಿರಿಸಲೂ ಪ್ರಯತ್ನಿಸುತ್ತಾನೆ. ಪ್ರಶಂಸೆಗೊಳಗಾದಾಗ ಹಿಗ್ಗುವುದೂ, ಟೀಕೆಗಳಿಂದ ಕುಗ್ಗುವುದೂ ಮನುಷ್ಯನ ಸಹಜ ಪ್ರವೃತ್ತಿ, ಟೀಕಿಸಲ್ಪಡುವ ವ್ಯಕ್ತಿ ಸಾಮಾನ್ಯವಾಗಿ ಎರಡು ಬಗೆಯಲ್ಲಿ ಪ್ರತಿಕ್ರಿಯಿಸುತ್ತಾನೆ. ಆತನ ಮೊದಲ ಪ್ರತಿಕ್ರಿಯೆಯೆಂದರೆ, ತನ್ನನ್ನು ತಾನು ಸಮರ್ಥಿಸಿಕೊಳ್ಳುವುದು ಅಥವಾ ರಕ್ಷಿಸಿಕೊಳ್ಳುವುದು. ಎರಡನೆಯದೆಂದರೆ ಟೀಕೆ ಮಾಡಿದವನ ಮೇಲೆ ಪ್ರತಿದಾಳಿ ಮಾಡುವುದು. ಈ ಎರಡು ಬಗೆಯ ಪ್ರತಿಕ್ರಿಯೆಗಳನ್ನು ಇಂಗ್ಲಿಷಿನಲ್ಲಿ 'ಡಿಫೆನ್ಸಿವ್' ಹಾಗೂ 'ಅಫೆನ್ಸಿವ್' ಎನ್ನುತ್ತಾರೆ.

ಟೀಕೆ, ಪ್ರಶಂಸೆಗಳೆರಡೂ ವ್ಯಕ್ತಿಯ ವಿಕಾಸಕ್ಕೆ ಅಗತ್ಯವೆಂಬುದನ್ನು ಮರೆಯಬಾರದು, ಆದರೆ ಅವೆರಡೂ ಸಕಾರಣವಾಗಿ, ಪ್ರಾಮಾಣಿಕವಾಗಿರಬೇಕು; ರಚನಾತ್ಮಕವಾಗಿರಬೇಕು, ಇತ್ಯಾತ್ಮಕವಾಗಿರಬೇಕು. ಟೀಕೆ ಎಂಬುದು ಒಬ್ಬ ವ್ಯಕ್ತಿಯ ಬಗೆಗಿನ ಪ್ರಾಮಾಣಿಕ ವಿಮರ್ಶೆಯಾದಾಗ, ಅದಕ್ಕೆ ಒಳಗಾದ ವ್ಯಕ್ತಿಗೆ ತನ್ನ ಇತಿಮಿತಿಗಳ ಅರಿವಾಗುತ್ತದೆ; ತನ್ನನ್ನು ತಿದ್ದಿಕೊಳ್ಳಲು ಅವಕಾಶವಾಗುತ್ತದೆ, ಅಂಥ ಟೀಕೆಯನ್ನು ಸ್ವೀಕರಿಸುವುದು ಆರೋಗ್ಯಕರ ಮನಸ್ಸಿನ ಲಕ್ಷಣ, ಟೀಕೆ ಎಂಬುದು ಪೂರ್ವಗ್ರಹದಿಂದ ಕೂಡಿದ್ದು, ಛಿದ್ರಾನ್ವೇಷಣೆಗೇ ಸೀಮಿತವಾದಾಗ, ಅದು ನೇತ್ಯಾತ್ಮಕವಾಗುತ್ತದೆ. ನಿಂದೆ, ವ್ಯಂಗ್ಯ ಮುಂತಾದ ರೂಪಗಳಲ್ಲಿ ಪ್ರಕಟವಾಗುವ ಈ ಬಗೆಯ ಟೀಕೆಯ ಹಿನ್ನೆಲೆಯಲ್ಲಿ ಅಸೂಯೆ, ಪೈಪೋಟಿ, ದ್ವೇಷ ಇತ್ಯಾದಿಗಳೇ ಹುದುಗಿಕೊಂಡಿರುತ್ತವೆ, ಅಂಥ ಟೀಕೆಗಳಿಂದ ತೇಜೋವಧೆಗೆ ಒಳಗಾದಾತ ಸಹಜವಾಗಿಯೇ ಕುಗ್ಗಿ ಹೋಗುತ್ತಾನೆ; ಖಿನ್ನತೆ ಹತಾಶೆಗಳಿಗೊಳಗಾಗುತ್ತಾನೆ, ಅತ್ಯಂತ ಪ್ರತಿಭಾಶಾಲಿಯಾಗಿದ್ದ ಕೀಟ್ಸ್ ಕವಿಯ ಅಕಾಲಿಕ ಮರಣಕ್ಕೆ ಇಂಥ ನೇತ್ಯಾತ್ಮಕ ಟೀಕೆಗಳೇ ಕಾರಣವೆನ್ನುತ್ತಾರೆ ಸಾಹಿತ್ಯ ಚರಿತ್ರಕಾರರು.

ಪ್ರಶಂಸೆಗೂ ಇಂಥದೇ ಎರಡು ಮುಖಗಳಿವೆ. ಸಕಾರಣ ಹಾಗೂ ಸಕಾಲಿಕವಾದ ಪ್ರಶಂಸೆ ವ್ಯಕ್ತಿಯ ನಿಜವಾದ ಯೋಗ್ಯತೆಯನ್ನು ಗುರುತಿಸುತ್ತದೆ, ಇದು ವ್ಯಕ್ತಿಯ ಪಾಲಿಗೆ ಪ್ರಿಯ ಮಾತ್ರವಲ್ಲ, ಅಗತ್ಯ ಕೂಡ. ಇಂಥ ಪ್ರಶಂಸೆ ಉತ್ತೇಜಕದಂತೆ ಕೆಲಸ ಮಾಡಿ, ಮನುಷ್ಯನಲ್ಲಿರುವ ಶಕ್ತಿ ಪ್ರತಿಭೆಗಳು ಇನ್ನಷ್ಟು ಪ್ರಖರಗೊಳ್ಳಲು ಸಹಕರಿಸುತ್ತದೆ. ಮನುಷ್ಯ ತನ್ನಲ್ಲಿರುವ ನಿಜವಾದ ಸಾಮರ್ಥ್ಯವನ್ನು ಕಂಡುಕೊಳ್ಳಲು ಅದು ನೆರವಾಗುತ್ತದೆ. ಸೀತಾನ್ವೇಷಣೆಯ ಸಂದರ್ಭದಲ್ಲಿ ಜಾಂಬವಂತ ಮಾಡಿದ ಇಂಥ ಸಕಾರಣ ಪ್ರಶಂಸೆಯಿಂದಾಗಿಯೇ, ಆಂಜನೇಯ ತನ್ನ ನಿಜವಾದ ಶಕ್ತಿಯನ್ನು ನೆನಪಿಸಿಕೊಂಡು, ಸಮುದ್ರವನ್ನು ಲಂಘಿಸಿದ್ದು. ಆದರೆ ಬಹಳಷ್ಟು ಬಾರಿ ಪ್ರಶಂಸೆಯೆಂಬುದು ಅಕಾರಣವಾಗಿರುತ್ತದೆ. ಆಗ ಅದು 'ಹೊಗಳುವಿಕೆ' ಅಥವಾ 'ಭಟ್ಟಂಗಿತನ'ವೆನ್ನಿಸಿಕೊಳ್ಳುತ್ತದೆ. ಹೀಗೆ ವ್ಯಕ್ತಿಯೊಬ್ಬನನ್ನು ವಿನಾಕಾರಣ ಹೊಗುಳುವವರ ಮನಸ್ಸಿನಲ್ಲಿ ಯಾವುದೋ ಪ್ರಯೋಜನ ಗಿಟ್ಟಿಸಿಕೊಳ್ಳಬೇಕೆಂಬ ಸ್ವಾರ್ಥವಿರುತ್ತದೆ. ಅಂಥವರು ಭಟ್ಟಂಗಿಗಳಂತೆ–ಸಂಬಂಧಿಸಿದವರನ್ನು ಹೊಗಳಿ, ಅಟ್ಟಕ್ಕೇರಿಸಿ, ತಮ್ಮ ಕೆಲಸವಾದ ನಂತರ ದೂರ ಸರಿಯುತ್ತಾರೆ. ಹೀಗಾಗಿ ಬಹಳ ಜನರ ಪಾಲಿಗೆ ಮೆಚ್ಚುವ ಕೆಲಸಕ್ಕಿಂತ ಹೊಗಳುವ ಕೆಲಸವೇ ಸುಲಭ ಹಾಗೂ ಲಾಭದಾಯಕ.

ಟೀಕೆಯಿಂದ ಕುಗ್ಗದೇ, ಪ್ರಶಂಸೆಯಿಂದ ಹಿಗ್ಗದೇ ಇರುವಂಥವರು ವಿರಳ. ಇಂಥ ಸಮಚಿತ್ತವುಳ್ಳ ವಿರಳ ವ್ಯಕ್ತಿಯನ್ನು ಕುರಿತು ಭಗವದ್ಗೀತೆಯಲ್ಲಿ ಕೃಷ್ಣ ಹೀಗೆಂದಿದ್ದಾನೆ: 'ತುಲ್ಯ ನಿಂದಾ ಸ್ತುತಿ ರ್ಮಾನೀ ಸಂತುಷ್ಟೋ ಯೇನಕೇನ ಚಿತ್।
ಅನಿಕೇತಃ ಸ್ಥಿರಯತಿಃ ಭಕ್ತಿ ಮಾನ್ ಮೇ ಪ್ರಯೋ ನರಃ॥'

(ನಿಂದೆ ಹೊಗಳಿಕೆಗಳೆರಡನ್ನೂ ಸಮಾನವಾಗಿ ಸ್ವೀಕರಿಸುವವನೂ, ಮೌನವಾಗಿರುವವನೂ, ತೃಪ್ತಾತ್ಮನೂ, ಅನಿಕೇತನನೂ, ಸ್ಥಿರ ಬುದ್ಧಿಯುಳ್ಳವನೂ ಯಾವಾತನೋ ಅವನೇ ನನ್ನ ನಿಜವಾದ ಭಕ್ತ. ಆತನೇ ನನಗೆ ಅತ್ಯಂತ ಪ್ರಿಯನಾದವನು.)

■ ವೈನತೇಯ

## ಮಾತೇ ಮುತ್ತು

★ ಒಳ್ಳೆಯ ಹೃದಯವಂತಿಕೆ ಇರುವವರನ್ನು ಸುಲಭವಾಗಿ ಎದುರಿಸುವುದು ಕಷ್ಟ.

-ಶೇಕ್ಸ್‌ಪಿಯರ್

★ ನೀರಿನಿಂದ ಬೆಂಕಿಯನ್ನು ಆರಿಸುವಂತೆ, ಜ್ಞಾನದಿಂದ ದುಃಖವನ್ನು ಶಾಂತಗೊಳಿಸಬೇಕು. ದುಃಖವು ಶಾಂತವಾದರೆ, ದೇಹವೂ ಸ್ವಸ್ಥವಾಗುವುದು.

-ಮಹಾಭಾರತ

★ ತನ್ನವರನ್ನು ಪ್ರೀತಿಸುವುದು ಕೋಮು ಪಕ್ಷಪಾತವಲ್ಲ. ಆದರೆ ಒಬ್ಬನು ತನ್ನವರಿಗೆ ಅವರ ಅಕ್ರಮ ಕಾರ್ಯಗಳಲ್ಲೂ ನೆರವಾಗುವುದು ಕೋಮು ಪಕ್ಷಪಾತ.

-ಮುಹಮ್ಮದ್ ಪೈಗಂಬರ್

★ ಅಕಸ್ಮಾತ್ತಾಗಿ ಬಂದ ಹಣದಿಂದ ತೃಪ್ತಿ ಹೊಂದುವವನು ಸುಖವಾಗಿರುತ್ತಾನೆ. ಮನಸ್ಸನ್ನು ಗೆಲ್ಲದವನು ಮೂರು ಲೋಕಗಳು ತನ್ನವಾದರೂ ಅತೃಪ್ತನಾಗಿ ಸುಖಿಯಾಗಲಾರನು.

-ಭಾಗವತ

★ ಅದೃಷ್ಟದ ಕೊಡುಗೆಯನ್ನು ಪಡೆಯುವುದು, ಅದನ್ನಿಟ್ಟುಕೊಳ್ಳುವುದಕ್ಕಿಂತ ಸುಲಭ.

-ಪಿ.ಸೈರಸ್

★ ದುರದೃಷ್ಟವನ್ನೆದುರಿಸಲು ಬೇಕಾದುದಕ್ಕಿಂತ ಹೆಚ್ಚಿನ ಸ್ಥೈರ್ಯ, ಅದೃಷ್ಟದ ಪ್ರಯೋಜನ ಪಡೆಯಲು ಬೇಕು.

-ಲಾ ರೊಚೆಫ್‌ಕಾಲ್ಡ್

★ ಅದೃಷ್ಟವೆಂದರೆ ನಾವು ಆಗಲೇ ಮಾಡಿದ ಕಾರ್ಯಗಳ ಒಳ್ಳೆಯ ಅಥವಾ ಕೆಟ್ಟ ಫಲಗಳಲ್ಲದೆ ಬೇರೇನೂ ಅಲ್ಲ. ಒಬ್ಬನ ಸ್ವಪ್ರಯತ್ನದ ಫಲವಾಗಿ ಯಾವುದು ಸಂಭವನೀಯವೋ ಅದನ್ನು ನಾವು ಅದೃಷ್ಟ ಎನ್ನುತ್ತೇವೆ.

-ಸ್ವಾಮಿಜಗದಾತ್ಮಾನಂದ

★ ಈ ಹಣೆಯ ಗೆರೆಗಳ ಮೇಲೆ ನಿಮ್ಮ ಅದೃಷ್ಟ ರಥ ಓಡುತ್ತದೆ. ರಥದೊಳಗೆ ಕೂತಿರುವ ನಾವು ಏನು ಮಾಡಬಲ್ಲೆವು? ಕುದುರೆಗಳು ನಮ್ಮದಲ್ಲ. ಲಗಾಮು ದೇವರ ಕೈಯಲ್ಲಿ. ದಿಬ್ಬಕ್ಕೆ ಎತ್ತಿಕೊಂಡು ಹೋಗಲಿ, ಹಳ್ಳಕ್ಕೆ ಉರುಳಿಸಿ ಬೀಳಿಸಲಿ, ಕಿಟಕಿಯಲ್ಲಿ ನೋಡುತ್ತಾ ನಾವು ಕಿರುಚಿಕೊಳ್ಳಬಲ್ಲೆವೇ ಹೊರತು ಇನ್ನೇನು ಮಾಡಬಲ್ಲೆವು?

-ಪರ್ವತವಾಣಿ

★ ಅದೃಷ್ಟ, ದುರದೃಷ್ಟ ಇಬ್ಬರೂ ಪ್ರಯಾಣ ಮಾಡುವುದು ಒಂದೇ ಗಾಡಿಯಲ್ಲಿಯೇ.

-ರಷ್ಯಾ ಗಾದೆ

★ ಮಣ ಬಂಗಾರಕ್ಕಿಂತ ತೊಲ ಅದೃಷ್ಟ ಮೇಲು.

-ಯಹೂದಿ ಗಾದೆ

★ ಅದೃಷ್ಟ ಸದಾಕಾಲಕ್ಕೆಂದು ಕೊಡುವುದಿಲ್ಲ; ಎರವಲು ಮಾತ್ರ ಕೊಡುತ್ತದೆ.

-ಸ್ವೀಡಿಷ್ ಗಾದೆ

★ ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.

-ಸ್ವಾಮಿ ವಿವೇಕಾನಂದ